ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

7

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ   ದಿನಾಂಕ : DATE : 12/12/20

# ಮೇಲ್ಮನೆ ಸಭಾಪತಿ ಪದಚ್ಯುತಿ ಸರ್ಕಸ್

12/12/20

## ವಿಶೇಷ ಅಧಿವೇಶನಕ್ಕೆ ಬಿಜೆಪಿ ಪಟ್ಟು

**ಬೆಂಗಳೂರು:** ಗ್ರಾಮ ಪಂ ಚುನಾವಣೆ ನಡುವೆಯೇ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ಪರಿಷತ್ ಸಭಾಪತಿ ಸ್ಥಾನದ ಜಟಾಪಟಿ ಜೋರಾಗಿದೆ. ಪರಿಷತ್ ಸಭಾಪತಿಯನ್ನು ಪದಚ್ಯುತ ಗೊಳಿಸಲು ಬಿಜೆಪಿ ಹಠಕ್ಕೆ ಬಿದ್ದಿದೆ. ಅದರಂತೆ, ಮಂಗಳವಾರ ಒಂದು ದಿನದ ಅಧಿವೇಶನ ಕರೆಯಲು ರಾಜ್ಯಪಾಲರ ಮೂಲಕ ಒತ್ತಡ ಹೇರುವ ಪ್ರಯತ್ನ ನಡೆಸುತ್ತಿದೆ.

ಮತ್ತೊಂದು ಕಡೆ ಸಂಸದೀಯ ವ್ಯವಹಾರಗಳ ಇಲಾಖೆ ಕಾರ್ಯದರ್ಶಿಗಳು, ವಿಧಾನ ಪರಿಷತ್ ಕಾರ್ಯದರ್ಶಿಗೆ ಪರಿಷತ್ ಕಲಾಪವನ್ನು ಡಿ.15ರಂದು ನಡೆಸಬೇಕೆಂದು ಪತ್ರ ಮುಖೇನ ಮನವಿ ಮಾಡಿದ್ದಾರೆ. ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ರಾಜ್ಯಪಾಲರ ನಡೆ ಮಹತ್ವ ಪಡೆದುಕೊಳ್ಳಲಿದ್ದು, ಕಾನೂನು ಸಂಘರ್ಷಕ್ಕೂ ಕಾರಣವಾಗುವ ಸಾಧ್ಯತೆ ಇದೆ.

ಸಭಾಪತಿ ಕೆ. ಪ್ರತಾಪಚಂದ್ರ ಶೆಟ್ಟಿ ಅವರನ್ನು ಶತಾಯಗತಾಯ ಕೆಳಗಿಳಿಸಬೇಕೆಂದು ಕಸರತ್ತು ನಡೆಸುತ್ತಿರುವ ಬಿಜೆಪಿ ನಾಯಕರು ಶುಕ್ರವಾರ ಬೆಳಗ್ಗೆಯಿಂದಲೇ ಕಾರ್ಯಪ್ರವೃತ್ತರಾದರು. ಪರಿಷತ್ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ನೇತೃತ್ವದಲ್ಲಿ ಸಭೆ ನಡೆಸಿ, ಸಭಾಪತಿ ನಿರ್ಣಯ ಕಾನೂನು ಬಾಹಿರವಾಗಿದ್ದು, ಡಿ.15ರವರೆಗೂ ಕಲಾಪ ನಡೆಸುವಂತೆ ಆಗ್ರಹಿಸಲು ನಿರ್ಧರಿಸಿದರು. ಮಂಗಳವಾರ ಒಂದು ದಿನದ ಕಲಾಪ ನಡೆಸುವಂತೆ ಸಭಾಪತಿಗೆ ನಿರ್ದೇಶನ ನೀಡುವಂತೆ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

**ಕಾಂಗ್ರೆಸ್‌ನಿಂದ ಪ್ರತಿತಂತ್ರ:** ಬಿಜೆಪಿಯ ಕಾರ್ಯತಂತ್ರಕ್ಕೆ ಕಾಂಗ್ರೆಸ್ ಕೂಡ ಪ್ರತಿತಂತ್ರ ರೂಪಿಸುತ್ತಿದೆ. ರಾಜ್ಯಪಾಲರು ಕೈಗೊಳ್ಳುವ ನಿರ್ಧಾರದ ಮೇಲೆ ಯಾವ ರೀತಿ ತಿರುಗೇಟು ನೀಡಬೇಕು ಹಾಗೂ ಕಾನೂನು ಪ್ರಕಾರ ಸಭಾಪತಿ ತೆಗೆದುಕೊಂಡ ತೀರ್ಮಾನದ ಮೇಲೆ ರಾಜ್ಯಪಾಲರು ನಿರ್ದೇಶನ ನೀಡಲು ಅವಕಾಶ ಇದೆಯೇ ಎಂಬ ಬಗ್ಗೆ ಕಾನೂನು ತಜ್ಞರಿಂದ ಮಾಹಿತಿ ಪಡೆಯಲು ಕಾಂಗ್ರೆಸ್ ನಿರ್ಧರಿಸಿದೆ.

### ಪತ್ರದಲ್ಲಿ ಏನಿದೆ?

- ಕಾರ್ಯ ಕಲಾಪಗಳ ಪಟ್ಟಿಯಂತೆ ಡಿ.15 ರವರೆಗೆ ಪರಿಷತ್ತಿನ ಕಲಾಪ ನಡೆಯಬೇಕಿತ್ತು.
- ಸದನ ಸಲಹಾ ಸಮಿತಿ ಸಭೆಯಲ್ಲಿ ಯಾವುದೇ ತೀರ್ಮಾನವಾಗಿರಲಿಲ್ಲ
- ಸದಸ್ಯರು ಬೆಂಗಳೂರು ಬಿಟ್ಟು ದೂರ ಹೋಗಿದ್ದಲ್ಲಿ 15ರಂದು ಬೆ.11ಕ್ಕೆ ಅಧಿವೇಶನ ಕರೆಯಬೇಕು
- ಸಭಾಪತಿಗಳ ವಿರುದ್ಧದ ಅವಿಶ್ವಾಸ ನಿರ್ಣಯದ ಚರ್ಚೆಗೆ ಅನುವು ಮಾಡಿಕೊಡಬೇಕು

ಚರ್ಚೆಗೆ ಅವಕಾಶ ನೀಡದೇ ಏಕಾಏಕಿ ಕಲಾಪ ಮುಂದೂಡಿರುವುದು ನಿಯಮಬಾಹಿರ. ಮಂಗಳವಾರ ಸದನ ಕರೆಯಲು ನಿರ್ದೇಶಿಸುವಂತೆ ರಾಜ್ಯಪಾಲರಿಗೆ ಮನವಿ ಮಾಡಿದ್ದೇವೆ.

- ಮಹಾಂತೇಶ ಕವಟಗಿಮಠ, ಮುಖ್ಯ ಸಚೇತಕ, ವಿಧಾನಪರಿಷತ್

ಸಭಾಪತಿ ಸರ್ಕಾರದ ಪರ ಇರಬೇಕು ಎಂದೇನೂ ಇಲ್ಲ. ಆದ್ರೆ, ಸರ್ಕಾರದ ಆಶಯಗಳಿಗೆ ವಿರುದ್ಧ ನಡೆಯುವ ಪ್ರವೃತ್ತಿ ಸರಿಯಲ್ಲ. ಹೀಗಾಗಿ 15ರಂದು ಕಲಾಪ ನಡೆಸಿ, ಅವಿಶ್ವಾಸ ನಿರ್ಣಯದ ಚರ್ಚೆಗೆ ಅವಕಾಶ ನೀಡಲು ಕೋರಿದ್ದೇವೆ.

- ಕೋಟ ಶ್ರೀನಿವಾಸ ಪೂಜಾರಿ, ವಿಧಾನಪರಿಷತ್ ಸಭಾ ನಾಯಕ

ಸಭಾಪತಿಗಳ ಕಾರ್ಯವೈಖರಿ ಸರಿಯಾಗಿಲ್ಲ. ಅದು ಸಾಂವಿಧಾನಿಕ ಮಹತ್ವ ಪಡೆದ ಗೌರವಯುತ ಹುದ್ದೆ. ಅದರಲ್ಲಿ ಕುಳಿತವರು ಶಿಸ್ತಿನಿಂದ ಇರಬೇಕು. ಈಗಿನ ವ್ಯವಸ್ಥೆ ನೋಡಿದರೆ ರಾಜ್ಯಪಾಲರು ಮಧ್ಯಪ್ರವೇಶ ಮಾಡಬೇಕಾಗಬಹುದು.

- ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸದಸ್ಯ